ಈ) ಪರೀಕ್ಷಾ ಕೇಂದ್ರಗಳನ್ನು ಕಡಿಮೆ ಮಾಡಬೇಕೆಂದು ಕೇಂದ್ರ ಸರ್ಕಾರದ ನಿರ್ದೇಶನವಿದೆ. ಆದುದರಿಂದ ಹೊಸದಾಗಿ ಯಾವ ಖಾಸಗಿ ಪರೀಕ್ಷಾ ಕೇಂದ್ರವನ್ನು ಜುಲೈ-2001ರ ಪರೀಕ್ಷೆ ಸಂಬಂಧವಾಗಿ ಗುರುತಿಸಿಲ್ಲ. ಅಲ್ಲದೆ ಬಾಗಲಕೋಟೆಯಲ್ಲಿ ಹೆಚ್ಚಾಗಿ ಪರೀಕ್ಷಾ ಕೇಂದ್ರವನ್ನು ಗುರುತಿಸುವ ಅವಶ್ಯಕತೆಯೂ ಕಂಡು ಬರಲಿಲ್ಲ.

ಬೇಲೂರು ತಾಲ್ಲೂಕಿನಲ್ಲಿ ನಬಾರ್ಡ್ ಯೋಜನೆಯಡಿ ರಸ್ತೆ.

2259(2689) ಶ್ರೀ ಪುಟ್ಟರಂಗನಾಥ್ ಎಸ್.ಹೆಚ್. (ಬೇಲೂರು) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಬೇಲೂರು ತಾಲ್ಲೂಕಿನಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಯಾವ ಯಾವ ರಸ್ತೆಕಾಲುದಾರಿ ಕೈಗೊಳ್ಳಲಾಗಿದೆ.

2. ಸಿ.ಆರ್.ಎಫ್. ಯೋಜನೆಯಡಿಯಲ್ಲಿ ಹಾಸನ ಜಿಲ್ಲೆಯಲ್ಲಿ ಯಾವ ಯಾವ ರಸ್ತೆ ತೆಗೆದುಕೊಳ್ಳಲಾಗಿದೆ (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

1) ಲೋಕೋಪಯೋಗಿ ಇಲಾಖೆಯಡಿ ಆರ್ ಐಡಿಎಫ್-2 ರಿಂದ 6ರವರೆಗೆ ಒಟ್ಟು ಕೆಳಕಂಡ 7 ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ ಲಕ್ಷ ರೂ.ಗಳಲ್ಲಿ	ಪ್ರಸ್ತುತ ಹಂತ
1.	ಬಿದರಹಳ್ಳಿ ನಾರ್ವೆ ಸುಳೆಗುಡ್ಡ ರಸ್ತೆ	97.00	ಪೂರ್ಣಗೊಂಡಿದೆ.
2.	ಅರಗೂರು ಸಂಕೇನಹಳ್ಳಿ ರಸ್ತೆ	40.00	ಪೂರ್ಣಗೊಂಡಿದೆ.
3.	ಹನಿಕೆ ಕುರಬರಬೂಡಿಹಾಳ್ ರಸ್ತೆ	61.00	ಪೂರ್ಣಗೊಂಡಿದೆ.
4.	ಬಿಬಿಎಂ ರಸ್ತೆಯಿಂದ ಕನ್ನಾಪುರ ಸೇರುವ ರಸ್ತೆ	26.00	ಪ್ರಗತಿಯಲ್ಲಿದೆ.
5.	ಎಲಗುಂಡ ಜಾವಗಲ್ ರಸ್ತೆ	45.00	ಪ್ರಗತಿಯಲ್ಲಿದೆ.
6.	ಸಿಎಂ ರಸ್ತೆಯಿಂದ ಮುತ್ತುಗನ್ನೆ ಮಾರ್ಗ ಹನಿಕೆ ಸೇರುವ ರಸ್ತೆ	33.00	ಗುತ್ತಿಗೆ ನೇಮಿಸಬೇಕಾಗಿದೆ
7.	ಕಂದಳಿ ಪಡವಳಲು ಬಿಕ್ಕೋಡು ರಸ್ತೆ	64.00	ಗುತ್ತಿಗೆ ನೇಮಿಸಬೇಕಾಗಿದೆ

2) ಸಿ.ಆರ್.ಎಫ್. ಯೋಜನೆಯಡಿ ಈವರೆಗೆ ಕಳಿಕಂಡ ರಸ್ತೆ ಕಾಮಗಾರಿಗಳು ಮಂಜೂರಾಗಿವೆ. ಸಕಲೇಶಪುರ ಸುಬ್ರಮಣ್ಯ ರಸ್ತೆ ರೂ. 72.95 ಲಕ್ಷ ಶ್ರೀರಂಗಪಟ್ಟಣ ಚನ್ನರಾಯಪಟ್ಟಣ ಅರಸೀಕೆರೆ ರಸ್ತೆಯ ಕಿ.ಮೀ 29.95 ಲಕ್ಷದುದ್ದ ಭಾಗೇಶ್ವರ ಅರಸೀಕೆರೆ ರಸ್ತೆ ರೂ. 47.60 ಲಕ್ಷ.

ಬೇಲೂರು ತಾಲ್ಲೂಕಿಗೆ ವಕ್ಫ್ ಮಂಡಳಿ ನೀಡಿರುವ ಹಣ.

2260(2690) ಶ್ರೀ ಪುಟ್ಟರಂಗನಾಥ್ ಎಸ್.ಹೆಚ್. (ಬೇಲೂರು) :— ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1 ಬೇಲೂರು ತಾಲ್ಲೂಕಿಗೆ ವಕ್ಫ್ ಮಂಡಳಿಯಿಂದ ಇದುವರೆವಿಗೆ ನೀಡಿರುವ ಹಣವೆಷ್ಟು?

ಶ್ರೀ ಎ. ಎಮ್. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :—

1. ಹಿಂದಿನ ಮೂರು ವರ್ಷಗಳಲ್ಲಿ ಬೇಲೂರು ತಾಲ್ಲೂಕಿನ ವಕ್ಫ್ ಸಂಸ್ಥೆಗಳಿಗೆ ಮಂಜೂರು ಮಾಡಿರುವ ಅನುದಾನ ಹಣದ ವಿವರ ಈ ಕೆಳಕಂಡಂತಿದೆ.

ವರ್ಷ	ವಕ್ಫ್ ಸಂಸ್ಥೆಗಳ ಸಂಖ್ಯೆ	ಮೊತ್ತ ರೂ.
1998-99	02	20,000-00
1999-2000	05	1,05,000-00
2000-2001	04	95,000-00
ಒಟ್ಟು	11	2,20,000-00

ಬೇಲೂರು ತಾಲ್ಲೂಕಿನಲ್ಲಿ ರಸ್ತೆ ಅಭಿವೃದ್ಧಿ.

2261(2691) ಶ್ರೀ ಪುಟ್ಟರಂಗನಾಥ್ ಎಸ್.ಹೆಚ್. (ಬೇಲೂರು) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಪ್ರವಾಸೋದ್ಯಮದ ಅಭಿವೃದ್ಧಿಗೆ ಬೇಲೂರು, ತಾಲ್ಲೂಕಿನ ಬೇಲೂರು-ಹಳೇಬೀಡು, ಹಳೇಬೀಡು-ಹಗರೆ ಮತ್ತು ಹಗರೆ-ಬೇಲೂರು ರಸ್ತೆಯ ಅಭಿವೃದ್ಧಿಗೆ ರೂ.೭.೫೦ ಲಕ್ಷ ರೂಪಾಯಿ ಪ್ರಸ್ತಾವನೆ ಸಲ್ಲಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಕೈಗೊಂಡಿರುವ ಕ್ರಮವೇನು?